# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್–35 ಅರಮನೆನಗರ, 17ನೇ ಅಡ್ಡರಸ್ತೆ, ಸದಾಶಿವನಗರ, ರಾಮಕೃಷ್ಣ ಹೆಗಡೆ ಸಂಕೀರ್ಣ, ಮೊದಲನೆ ಮಹಡಿ, ಸದಾಶಿವನಗರ,ಬೆಂಗಳೂರು

ಸಂಖ್ಯೆ: ಸ.ಅ/ವಾರ್ಡ ಸಮಿತಿ–35/ಸಭೆ–1/2020–21

ದಿನಾಂಕ: 03–10–2020

## ದಿನಾಂಕ:3–10–2020 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು:

## ಸಭೆಯಲ್ಲಿ ಹಾಜರಿದ್ದವರು:

1. ಬಿಬಿಎಂಪಿ ವಾರ್ಡ್ ಸಂಖ್ಯೆ 35–ಅರಮನೆನಗರ ಅಧ್ಯಕ್ಷರಾದ ಶ್ರೀ ಗಂಗಾಧರ್ ಸ್ವಾಮಿರವರು
2. ಹಿರಿಯ ಆರೋಗ್ಯ ಪರಿವೀಕ್ಷಕರು
3. ವಾರ್ಡ್ ಸಮಿತಿ ಸದಸ್ಯರು.
4. ಸಹಾಯಕ ಅಭಿಯಂತರರು ವಾರ್ಡ್–35
5. ಕಂದಾಯ ಮೌಲ್ಯಮಾಪಕರು/ಪರಿವೀಕ್ಷಕರು/ವಸೂಲಿಗಾರರು.
6. ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳು
7. ಬೆಸ್ಕಾಂ ಅಧಿಕಾರಿಗಳು
8. ಆರಕ್ಷಕರ ಕಛೇರಿಯ ಅಧಿಕಾರಿಗಳು/ಸಿಬ್ಬಂದಿಗಳು
9. ಅರಣ್ಯ ಇಲಾಖೆ, ಬಿಬಿಎಂಪಿ ರವರು

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಯಾದ ಶ್ರೀಮತಿ. ಹರ್ಷಾ ನಾಯಕ್ ರವರು ವಾರ್ಡ್ ಸಮಿತಿಯ ಅಧ್ಯಕ್ಷರಾದ ಶ್ರೀ ಗಂಗಾಧರ್ ಸ್ವಾಮಿರವರನ್ನು, ವಾರ್ಡ ಸಮಿತಿಯ ಸದಸ್ಯರು ಮತ್ತು ಅಧಿಕಾರಿ/ಸಿಬ್ಬಂದಿಗಳನ್ನು ಸ್ವಾಗತಿಸುತ್ತಾ, ಮಾನ್ಯ ಆಯುಕ್ತರವರ ಆದೇಶದನ್ವಯ ಹೊಸದಾಗಿ ನೇಮಿಸಲಾಗಿರುವ ನೋಡೆಲ್ ಅಧಿಕಾರಿಯವರ ಪರಿಚಯ ಮಾಡುತ್ತಾ, ಹಾಗೂ ಸಭೆಗೆ ಹಾಜಾರಾದ ಅಧಿಕಾರಿ/ಸಿಬ್ಬಂದಿಗಳ ಪರಿಚಯ ಮಾಡಿಕೊಂಡು, ಸಭೆಯನ್ನು ಪ್ರಾರಂಭಿಸಲಾಯಿತು.

**ಈ ಕೆಳಕಂಡ ವಿಷಯಗಳ ಬಗ್ಗೆ ವಾರ್ಡ್ ಸಮಿತಿಯ ಸಭೆಯಲ್ಲಿ ಚರ್ಚಿಸಲಾಯಿತು.**

1. ಸಭೆಗೆ ಸೇರಿದ ಸದಸ್ಯರು ಮಳೆಯ ಆರ್ಭಟ ರಭಸವಿರುವುದರಿಂದ ಮ್ಯಾನ್‌ಹೋಲ್ ಗಳನ್ನು ಆಗ್ಗಿಂದಾಗಿ desilt ಮಾಡದೇ, ಚರಂಡಿ ನೀರು ರಸ್ತೆ ಮೇಲ್ಬೈ ಹರಿದು ದುರ್ನಾತದಿಂದ ಕೂಡಿದ್ದು, ಹಿರಿಯ ನಾಗರೀಕರು ಮತ್ತು ಚಿಕ್ಕ ಮಕ್ಕಳು ಹೊರಗೆ ಹೋಗದಂತೆ ಆಗಿರುತ್ತದೆ ಎಂದು ತಿಳಿಸುತ್ತಾ, ರಂಗನಾಥಪುರದ 16ನೇ ಅಡ್ಡರಸ್ತೆಯಲ್ಲಿ ಸ್ಯಾನಿಟರಿ ಲೈನ್ ದುರಸ್ಥಿ ಪಡಿಸುವುದು, ಪೂಜಾರಿ ಲೇಔಟ್‌ನ 1ನೇ ಅಡ್ಡರಸ್ತೆಯಲ್ಲಿ ಸ್ಯಾನಿಟರಿ ಲೀಕೇಜ್ ಆಗುತ್ತಿರುವ ಬಗ್ಗೆ, ಆಂಜನೇಯ ದೇವಸ್ಥಾನ 3ನೇ ಅಡ್ಡರಸ್ತೆಯಲ್ಲಿ ಮ್ಯಾನ್‌ಹೋಲ್ ಲೀಕೇಜ್ ಆಗುತ್ತಿರುವ ಬಗ್ಗೆ ತಿಳಿಸಿ ಕೂಡಲೇ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ. ––––––––––––– **ಮಲ್ಲೇಶ್ವರಂ, ಸದಾಶಿವನಗರ ಮತ್ತು ಮತ್ತಿಕೆರೆ ಉಪ–ವಿಭಾಗ, ಬೆಂಗಳೂರು ನೀರು ಸರಬುರಾಜು ಮತ್ತು ಒಳಚರಂಡಿ ನಿಗಮರವರ ಅಗತ್ಯ ಕ್ರಮಕ್ಕಾಗಿ.**
2. ಸ್ಯಾಂಕಿ ಕೆರೆಯ ಕಲ್ಯಾಣಿಯಲ್ಲಿ ನೀರು ತುಂಬಿದ್ದು, ಇದರಿಂದಾಗಿ ಸೊಳ್ಳೆ ಕಾಟವು ಜಾಸ್ತಿಯಾಗಿದ್ದು, ಸ್ಥಳೀಯರಿಗೆ ಡೆಂಗ್ಯೂ ಕಾಯಿಲೆ ಹರಡುವ ಸಂಭವವಿರುವುದರಿಂದ ಕೂಡಲೇ excess water ಹೊರಹಾಕಲು ತಿಳಿಸಲಾಯಿತು ––––– **ಬೃಬೆಂ.ಮ.ನ. ಪಾಲಿಕೆಯ Lakes dept**
3. ಕಾವೇರಿ ಅಂಡರ್‌ಪಾಸ್‌ನಲ್ಲಿ ಮಳೆ ಬಂದಾಗ ನಿರಂತರವಾಗಿ ನೀರು ನಿಲ್ಲುತ್ತಿದ್ದು, ವಾಹನ ಸವಾರರಿಗೆ ಇದರಿಂದಾಗಿ ಅಡಚಣೆ ಉಂಟಾಗಿದ್ದು, ದ್ವಿಚಕ್ರ ವಾಹನ ಸವಾರರು skid ಆಗಿ ಬೀಳುತ್ತಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳಲು ಟ್ರಾಫಿಕ್

ಮು.ತಿ.ನೋ

ಪೋಲೀಸ್ ತಿಳಿಸಿರುತ್ತಾರೆ ಮತ್ತು Giriyas ಮುಂಭಾಗದಲ್ಲಿ center median ಅಳವಡಿಸಲು ತಿಳಿಸಿರುತ್ತಾರೆ ಮತ್ತು ಸಿ.ವಿ ರಾಮನ್ ರಸ್ತೆಯಲ್ಲಿ ರಸ್ತೆ ಗುಂಡಿಯಿದ್ದು ಕೂಡಲೇ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ. ------- **ರಸ್ತೆಮೂಲಭೂತ ಸೌಕರ್ಯ, ಪಶ್ಚಿಮ ವಿಭಾಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಅಗತ್ಯ ಕ್ರಮಕ್ಕಾಗಿ.**

4. ಡಾಲರ್ಸ್ ಕಾಲೋನಿಯ ಆರ್.ಎಂ.ವಿ ಎಕ್ಸ್‌ಟೆನ್ಷನ್‌ನಲ್ಲಿ ರಸ್ತೆ ಬೀದಿ ದೀಪಗಳು ರಾತ್ರಿ ಹೊತ್ತು ಉರಿಯದ ಕಾರಣ ಕಳ್ಳರ ಕಾಟವು ಜಾಸ್ತಿಯಾಗಿದ್ದು, ಒಬ್ಬಂಟಿ ಮಹಿಳೆ ರಾತ್ರಿ ಹೊತ್ತಿನಲ್ಲಿ ಓಡಾಡಡಲು ಕಷ್ಟ ಸಾಧ್ಯವಾಗಿರುತ್ತದೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ------- **ಬಿಬಿಎಂಪಿ ಇಲೆಕ್ಟ್ರಿಕಲ್ ವಿಭಾಗ ಪಶ್ಚಿಮ ವಲಯ ರವರ ಅಗತ್ಯ ಕ್ರಮಕ್ಕಾಗಿ**

5. ಮೆಕ್ರಿ ಸರ್ಕಲ್ ನಿಂದ ಗುಟ್ಟಹಳ್ಳಿ ಬಸ್ ನಿಲ್ದಾಣದ ವರೆಗೆ ಎಡ ಬದಿಯಲ್ಲಿ ಮರದ ಕೊಂಬೆಗಳು ಪಾದಚಾರಿ ಮಾರ್ಗಕ್ಕೆ ವಾಲಿದ್ದು, ಪಾದಚಾರಿಗಳು ಓಡಾಡಲು ಅಡಚಣೆಯುಂಟಾಗಿರುತ್ತದೆ. ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ಟ್ರಾಫಿಕ್ ಪೋಲೀಸ್ ತಿಳಿಸಿರುತ್ತಾರೆ------ **ಬಿಬಿಎಂಪಿ ಅರಣ್ಯ ವಿಭಾಗ ಪಶ್ಚಿಮ ವಲಯ ರವರ ಅಗತ್ಯ ಕ್ರಮಕ್ಕಾಗಿ**

6. ರಾಮಯ್ಯ ಕಾಲೇಜ್ ಹಿಂಭಾಗದ ಅಂಗಡಿ ಮಾಲೀಕರು ರಾತ್ರಿ 12ರವರೆಗೆ ಅಂಗಡಿ ಮುಂಗಟ್ಟು ತೆರೆದಿರುತ್ತದೆ. ಈ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ--- **ಆರೋಗ್ಯಾಧಿಕಾರಿಗಳು ಬಿಬಿಎಂಪಿ ಮತ್ತು ಸದಾಶಿವನಗರ ಪೋಲಿಸ್‌ರವರ ರವರ ಅಗತ್ಯ ಕ್ರಮಕ್ಕಾಗಿ**

ಅಧ್ಯಕ್ಷರು

ಕಾರ್ಯದರ್ಶಿ

**ಪ್ರತಿಯನ್ನು:**

1. ಪೂಜ್ಯ ಮಹಾಪೌರರು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಪೂಜ್ಯ ಉಪ ಮಹಾಪೌರರು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಆಯುಕ್ತರು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಕಾರ್ಯದರ್ಶಿಗಳು ಕೌನ್ಸಿಲ್ ಕಾರ್ಯಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ವಾರ್ಡ್ ಸಮಿತಿ ಸದಸ್ಯರು ಬಿಬಿಎಂಪಿ ರವರ ಅವಗಾಹನೆಗಾಗಿ ಮಂಡಿಸಿದೆ.
6. ಮಾನ್ಯ ಜಂಟಿ/ಉಪ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
7. ಮಾನ್ಯ ಕಂದಾಯ ಅಧಿಕಾರಿ(ಮಲ್ಲೇಶ್ವರಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
8. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ವಿದ್ಯುತ್/ತೋಟಗಾರಿಕೆ/ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರ ಅವಗಾಹನೆಗಾಗಿ ಮಂಡಿಸಿದೆ.
9. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ಮತ್ತಿಕೆರೆ) ಉಪ ವಿಭಾಗ ರವರ ಅವಗಾಹನೆಗಾಗಿ ಮಂಡಿಸಿದೆ.
10. ಸಹಾಯಕ ಕಂದಾಯ ಅಧಿಕಾರಿ(ಕಲ್ಯಾಣ–ಪಶ್ಚಿಮ) ರವರ ಅವಗಾಹನೆಗಾಗಿ ಮಂಡಿಸಿದೆ.
11. ಕಛೇರಿ ಕಡತಕ್ಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್–35 ಅರಮನೆನಗರ, 17ನೇ ಅಡ್ಡರಸ್ತೆ, ಸದಾಶಿವನಗರ, ರಾಮಕೃಷ್ಣ ಹೆಗಡೆ ಸಂಕೀರ್ಣ, ಮೊದಲನೆ ಮಹಡಿ, ಸದಾಶಿವನಗರ,ಬೆಂಗಳೂರು

---

ಸಂಖ್ಯೆ: ಸ.ಅ/ವಾರ್ಡ ಸಮಿತಿ–35/ಸಭೆ–2/2020–21 ದಿನಾಂಕ: 20–10–2020

**ದಿನಾಂಕ:20–10–2020 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು:**

**ಸಭೆಯಲ್ಲಿ ಹಾಜರಿದ್ದವರು:**

1. ಹಿರಿಯ ಆರೋಗ್ಯ ಪರಿವೀಕ್ಷಕರು
2. ವಾರ್ಡ್ ಸಮಿತಿ ಸದಸ್ಯರು.
3. ಕಂದಾಯ ಮೌಲ್ಯಮಾಪಕರು/ಪರಿವೀಕ್ಷಕರು/ವಸೂಲಿಗಾರರು.
4. ಬೆಸ್ಕಾಂ ಅಧಿಕಾರಿಗಳು
5. ಆರಕ್ಷಕರ ಕಛೇರಿಯ ಅಧಿಕಾರಿಗಳು/ಸಿಬ್ಬಂದಿಗಳು

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಯಾದ ಶ್ರೀಮತಿ. ಹರ್ಷಾ ನಾಯಕ್ ರವರು ವಾರ್ಡ್ ಸಮಿತಿಯ ಸದಸ್ಯರನ್ನು ಮತ್ತು ಅಧಿಕಾರಿ/ಸಿಬ್ಬಂದಿಗಳನ್ನು ಸ್ವಾಗತಿಸುತ್ತಾ, ವಾರ್ಡ್ ನೋಡೆಲ್ ಅಧಿಕಾರಿಯವರು ಆರೋಗ್ಯ ಸರಿಯಿಲ್ಲದ ಕಾರಣದಿಂದ ಸಭೆಗೆ ಗೈರಾಗಿರುತ್ತಾರೆ ಹಾಗೂ ಸಭೆಗೆ ಹಾಜಾರಾದ ಅಧಿಕಾರಿ/ಸಿಬ್ಬಂದಿಗಳ ಪರಿಚ'ಯ ಮಾಡಿಕೊಂಡು, ಸಭೆಯನ್ನು ಪ್ರಾರಂಭಿಸಲಾಯಿತು.

**ಈ ಕೆಳಕಂಡ ವಿಷಯಗಳ ಬಗ್ಗೆ ವಾರ್ಡ್ ಸಮಿತಿಯ ಸಭೆಯಲ್ಲಿ ಚರ್ಚಿಸಲಾಯಿತು.**

1. ಸಭೆಗೆ ಸೇರಿದ ಸದಸ್ಯರು ಮಳೆಯ ಆರ್ಭಟ ರಭಸವಿರುವುದರಿಂದ ಮ್ಯಾನ್‌ಹೋಲ್ ಗಳನ್ನು ಆಗ್ಗಿಂದಾಗಿ desilt ಮಾಡದೇ, ಚರಂಡಿ ನೀರು ರಸ್ತೆ ಮೇಲ್ಮೈ ಹರಿದು ದುರ್ನಾತದಿಂದ ಕೂಡಿದ್ದು, ಹಿರಿಯ ನಾಗರೀಕರು ಮತ್ತು ಚಿಕ್ಕ ಮಕ್ಕಳು ಹೊರಗೆ ಹೋಗದಂತೆ ಆಗಿರುತ್ತದೆ ಎಂದು ತಿಳಿಸುತ್ತಾ, ರಂಗನಾಥಪುರದ 16ನೇ ಅಡ್ಡರಸ್ತೆಯಲ್ಲಿ ಸ್ಯಾನಿಟರಿ ಲೈನ್ ದುರಸ್ಥಿ ಪಡಿಸುವುದು, ಪೂಜಾರಿ ಲೇಔಟ್‌ನ 1ನೇ ಅಡ್ಡರಸ್ತೆಯಲ್ಲಿ ಸ್ಯಾನಿಟರಿ ಲೀಕೇಜ್ ಆಗುತ್ತಿರುವ ಬಗ್ಗೆ, ಆಂಜನೇಯ ದೇವಸ್ಥಾನ 3ನೇ ಅಡ್ಡರಸ್ತೆಯಲ್ಲಿ ಮ್ಯಾನ್‌ಹೋಲ್ ಲೀಕೇಜ್ ಆಗುತ್ತಿರುವ ಬಗ್ಗೆ ತಿಳಿಸಿ ಕೂಡಲೇ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ ಮತ್ತು ಎಂಎಸ್‌ಆರ್ ನಗರದ 3, 4 ಮತ್ತು 5ನೇ ಅಡ್ಡರಸ್ತೆಗಳಲ್ಲಿ ಸ್ಯಾನಿಟರಿ ಲೈನ್ ಅನ್ನು ಕೂಡಲೇ ಬದಲಿಸಲು ತಿಳಿಸಿರುತ್ತಾರೆ & ಎಸ್ ಆರ್ ಅಪಾರ್ಟ್‌ಮೆಂಟ್‌ನಿಂದ ಚಿಕ್ಕಮಾರನಹಳ್ಳಿ ಬಸ್ ನಿಲ್ದಾಣದವರೆಗೆ ಸ್ಯಾನಿಟರಿ ಲೀಕೇಜ್ ಆಗುತ್ತಿರುವ ಬಗ್ಗೆ ಮತ್ತು ಡಾಲರ್ಸ್ ಕಾಲೋನಿಯಲ್ಲಿ ನೀರಿನ ಸಮಸ್ಯೆ ಇದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಕೂಡಲೇ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ.
   **** ಈ ಬಗ್ಗೆ ಕನಕ್ ಎ.ಇ ಬೆಂಗಳೂರು ನೀರು ಸರಬುರಾಜು ಮತ್ತು ಒಳಚರಂಡಿ ನಿಗಮರವರು 2 ಸಭೆಗೆ ಹಾಜರಾಗದ ಕಾರಣ ಮೇಲಿನ ಕಾರ್ಯ ಬಾಕಿ ಇರುತ್ತದೆ ** _______ ಮಲ್ಲೇಶ್ವರಂ, ಸದಾಶಿವನಗರ ಮತ್ತು ಮತ್ತಿಕೆರೆ ಉಪ-ವಿಭಾಗ, ಬೆಂಗಳೂರು ನೀರು ಸರಬುರಾಜು ಮತ್ತು ಒಳಚರಂಡಿ ನಿಗಮರವರ ಅಗತ್ಯ ಕ್ರಮಕ್ಕಾಗಿ.**

2. ಡಾಲರ್ಸ್ ಕಾಲೋನಿಯ ಆರ್.ಎಂ.ವಿ ಎಕ್ಸ್‌ಟೆನ್ಷನ್‌ನಲ್ಲಿ ರಸ್ತೆ ಬೀದಿ ದೀಪಗಳು ರಾತ್ರಿ ಹೊತ್ತು ಉರಿಯದ ಕಾರಣ ಕಳ್ಳರ ಕಾಟವು ಜಾಸ್ತಿಯಾಗಿದ್ದು, ಒಬ್ಬಂಟಿ ಮಹಿಳೆ ರಾತ್ರಿ ಹೊತ್ತಿನಲ್ಲಿ ಓಡಾಡಡಲು ಕಷ್ಟ ಸಾಧ್ಯವಾಗಿರುತ್ತದೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ **** ಈ ಬಗ್ಗೆ ಬಾಷಾ ಜೆ.ಇ ಬಿಬಿಎಂಪಿ ರವರು 2 ಸಭೆಗೆ ಹಾಜರಾಗದ ಕಾರಣ ಮೇಲಿನ ಕಾರ್ಯ ಬಾಕಿ ಇರುತ್ತದೆ** _______ಬಿಬಿಎಂಪಿ ಇಲೆಕ್ಟ್ರಿಕಲ್ ವಿಭಾಗ ಪಶ್ಚಿಮ ವಲಯ ರವರ ಅಗತ್ಯ ಕ್ರಮಕ್ಕಾಗಿ**

ಮು.ತಿ.ನೋ

3. 14ನೇ ಮುಖ್ಯರಸ್ತೆ ಸದಾಶಿವನಗರದ ಮನೆಯ ಮೇಲೆ ಮೊಬೈಲ್ ಟವರ್ ಅಳವಡಿಸುತ್ತಿದ್ದು, ಮತ್ತು #223 ಅನ್ನು ವಾಣಿಜ್ಯ ಉದ್ದೇಶಕ್ಕಾಗಿ ಮಾರ್ಪಡಿಸುತ್ತಿದ್ದು, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ______ **ಸಹಾಯಕ ಅಭಿಯಂತರರು ವಾರ್ಡ್–35 ಬಿಬಿಎಂಪಿ ರವರ ಕ್ರಮಕ್ಕಾಗಿ**

4. ವೀರೇಂದ್ರ ಪಾಟೀಲ್ ಪಾರ್ಕ್ ಒಳಾಂಗಣದಲ್ಲಿ, ಎಂಎಸ್ಆರ್ ನಗರದಲ್ಲಿ, ಡಾಲರ್ಸ್ ಕಾಲೋನಿಯಲ್ಲಿ ರಸ್ತೆ ಬದಿ ದೀಪಗಳು ಉರಿಯದ ಕಾರಣ ಕೂಡಲೇ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ_____ **ಜೆ.ಇ ಬಾಷಾ ಇಲೆಕ್ಟ್ರಿಕಲ್ ರವರ ಅಗತ್ಯ ಮತ್ತು ತುರ್ತು ಕ್ರಮಕ್ಕಾಗಿ**

5. ಬೆಸ್ಕಾಂರವರು L&T ಕಡೆಯಿಂದ Overhead cable ಅನ್ನು UG cable ಮಾಡುವ ಪ್ರಕ್ರಿಯೆಯನ್ನು 1ನೇ ಮುಖ್ಯರಸ್ತೆಯಿಂದ 1ನೇ ಅಡ್ಡರಸ್ತೆಯವರೆಗೆ ಕಾಮಗಾರಿಯನ್ನು ನಿರ್ವಹಿಸಿದ್ದು, ಇದೂವರೆಗೂ ಪೂರ್ಣಗೊಳಿಸಿರುವುದಿಲ್ಲ, ಈ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ_____ **ಸಹಾಯಕ ಅಭಿಯಂತರರು ವಾರ್ಡ್–35 ಬಿಬಿಎಂಪಿ ರವರ ಕ್ರಮಕ್ಕಾಗಿ.**

6. ಎಸ್ಟೀಮ್ ಅಪಾರ್ಟ್‌ಮೆಂಟ್‌ರವರು ತಮಗೆ ಪಾಲಿಕೆಯಿಂದ ರಸ್ತೆ ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಕೋರಿದ್ದು, ಈ ಬಗ್ಗೆ ಸದರಿ ನಿವಾಸಿರವರು ಪಾಲಿಕೆಗೆ ಕಂದಾಯ ಸಂದಾಯ ಮಾಡುತ್ತಿರುವ ಬಗ್ಗೆ ಖಾತ್ರಿ ಪಡಿಸಲು ತಿಳಿಸಲಾಯಿತು____ **ಸಹಾಯಕ ಕಂದಾಯ ಅಧಿಕಾರಿ (ಮತ್ತಿಕೆರೆ) ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ'**

7. ಕೋವಿಡ್–19 ರ ಸಂಬಂಧ ಅಪಾರ್ಟ್‌ಮೆಂಟ್‌ಗಳಲ್ಲಿ ಬರುವ ಹೌಸ್ ಕೀಪಿಂಗ್‌ರವರಿಗೆ, ಮನೆಗೆಲಸದವರಿಗೆ ಪರೀಕ್ಷೆಗೊಳಪಡಿಸಲು ಡಾಕ್ಟರ್‌ಗಳು ತಿಳಿಸಿದ್ದು, ಈ ಬಗ್ಗೆ ವಾರ್ಡ್ ಸಮಿತಿಯಲ್ಲಿ ಸದಸ್ಯರು ಸಹಮತ ವ್ಯಕ್ತಪಡಿಸಿರುತ್ತಾರೆ.

8. ಅಶ್ವಥ್‌ನಗರದ ಆರ್ಶೀವಾದ ರೆಸಿಡೆನ್ಸಿ ರವರು 4 ಮತ್ತು 5ನೇ ಅಡ್ಡರಸ್ತೆಯ ಪಾದಚಾರಿ ಮಾರ್ಗದ ಮೇಲೆ ಹೂವಿನ ಕುಂಡವನ್ನು ಇಟ್ಟು ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಈ ಬಗ್ಗೆ ಕೂಡಲೇ ತೆರವುಗೊಳಿಸುವಂತೆ ತಿಳಿಸಿರುತ್ತಾರೆ._______ **ಸಹಾಯಕ ಅಭಿಯಂತರರು ಮತ್ತು ಘನತ್ಯಾಜ್ಯ ನಿರ್ವಹಣೆರವರಿಗೆ ಅಗತ್ಯ ಕ್ರಮಕ್ಕಾಗಿ**

ಮುಂದುವರೆದು ವಾರ್ಡ್ ಸಮಿತಿಯ ಸದಸ್ಯರು BWSSB, BESCOM (Sadashivanagar), BBMP ELECTRICAL, BBMP FOREST, BBMP LAKES, BBMP HORTICULTURE ಇಲಾಖೆಯ ಅಧಿಕಾರಿ/ಸಿಬ್ಬಂದಿಗಳು ಸಭೆಗೆ ಹಾಜರಾಗದೇ ಇರುವ ಹೆಚ್ಚಿನ ರೀತಿಯಲ್ಲಿ ವಾರ್ಡಿನ ಸಮಸ್ಯೆಗೆ ಬಗ್ಗೆ ತಿಳಿಸಲು ಸಾಧ್ಯವಾಗದ ಕಾರಣ ಈ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ ಮತ್ತು ಮುಂದಿನ ಸಭೆಯಲ್ಲಿ ಎಲ್ಲಾ ಇಲಾಖೆಯ ಸಮನ್ವಯದೊಂದಿಗೆ ಸಭೆ ನಡೆಸಲು ಚರ್ಚಿಸಲಾಯಿತು. ಸಭೆಗೆ ಹಾಜರಾಗದೇ ಇರುವ ಅಧಿಕಾರಿ/ಸಿಬ್ಬಂದಿ ವರ್ಗದ ಮೇಲೆ ಕ್ರಮ ಜರುಗಿಸುವ ಬಗ್ಗೆ ಮಾನ್ಯ ಆಯುಕ್ತರೊಂದಿಗೆ ಚರ್ಚಿಸಲು ತಿಳಿಸಿರುತ್ತಾರೆ.

**ಅಧ್ಯಕ್ಷರು** **ಕಾರ್ಯದರ್ಶಿ**

**ಪ್ರತಿಯನ್ನು:**

1. ಪೂಜ್ಯ ಮಹಾಪೌರರು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಪೂಜ್ಯ ಉಪ ಮಹಾಪೌರರು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಆಯುಕ್ತರು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಕಾರ್ಯದರ್ಶಿಗಳು ಕೌನ್ಸಿಲ್ ಕಾರ್ಯಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ವಾರ್ಡ್ ಸಮಿತಿ ಸದಸ್ಯರು ಬಿಬಿಎಂಪಿ ರವರ ಅವಗಾಹನೆಗಾಗಿ ಮಂಡಿಸಿದೆ.
6. ಮಾನ್ಯ ಜಂಟಿ/ಉಪ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
7. ಮಾನ್ಯ ಕಂದಾಯ ಅಧಿಕಾರಿ(ಮಲ್ಲೇಶ್ವರಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
8. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ವಿದ್ಯುತ್/ತೋಟಗಾರಿಕೆ/ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರ ಅವಗಾಹನೆಗಾಗಿ ಮಂಡಿಸಿದೆ.

ಮ.ತಿ.ನೋ